**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಡಾ: ಧನಂಜಯ ಸರ್ಜಿ ಇವರು ನಿಯಮ 72 ರಡಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.**

**ವಿಷಯ**

2016ಕ್ಕಿಂತ ಮುಂಚೆ 1 ರಿಂದ 7/8ಕ್ಕೆ ನೇಮಕ ಹೊಂದಿದ ರಾಜ್ಯದ ಸೇವಾ ನಿರತ ಪ್ರಾಥಮಿಕ ಶಾಲಾ ಶಿಕ್ಷಕರಲ್ಲಿ ಪದವಿ ಪೂರೈಸಿದ ಶಿಕ್ಷಕರನ್ನು ಅವರ ಸೇವಾ ಜೇಷ್ಠತೆಯೊಂದಿಗೆ ವೃಂದ ಬದಲಾದ ದಿನಾಂಕದಿಂದ ಅನ್ವಯವಾಗುವಂತೆ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (ಜಿಪಿಟಿ 6-8) ಎಂದು ಪದನಾಮಿಕರಿಸಿ ಜಿಪಿಟಿ ವೃಂದದಲ್ಲಿ ವಿಲಿನಗೊಳಿಸುವ ಕುರಿತು ಹಾಗೂ ಹೊಸ ಸಿ.ಅಂಡ್. ಆರ್ ನಿಯಮಾವಳಿಗಳನ್ನು ತಿದ್ದುಪಡಿ ಮಾಡಿರುವುದರಿಂದ ಆಗಿರುವ ಗೊಂದಲಗಳ ಕುರಿತು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ**

**ಪ್ರಾಥಮಿಕ ಶಾಲಾ ಶಿಕ್ಷಕರಿಂದ (ಪಿ.ಎಸ್.ಟಿ.) ಜಿ.ಪಿಟಿ ಶಿಕ್ಷಕರಾಗಿ ಬಡ್ತಿ ನೀಡುವುದಕ್ಕೆ ಸಂಬಂಧಿಸಿದಂತೆ:**

1. ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ (NCTE) ದಿನಾಂಕ:23.08.2010, 29.07.2011 ಮತ್ತು 12.11.2014ರ ಅಧಿಸೂಚನೆಗಳ ಪ್ರಕಾರ 1 ರಿಂದ 5 ನೇ ತರಗತಿ ಹಾಗೂ 6 ರಿಂದ 8 ನೇ ತರಗತಿಗಳಿಗೆ ನೇಮಿಸಬೇಕಾದ ಶಿಕ್ಷಕರ ವಿದ್ಯಾರ್ಹತೆಯನ್ನು ನಿಗದಿಪಡಿಸಿದೆ.
2. ಉಚಿತ ಕಡ್ಡಾಯ ಶಿಕ್ಷಣ ಕಾಯಿದೆ ಅನುಸಾರ 6 ರಿಂದ 8ನೇ ತರಗತಿಗಳಿಗೆ ಭಾಷೆ, ಗಣಿತ ವಿಜ್ಞಾನ ಮತ್ತು ಸಮಾಜ ಪಾಠಗಳಿಗೆ ಕನಿಷ್ಟ ಒಬ್ಬರು ಶಿಕ್ಷಕರನ್ನು ಕಡ್ಡಾಯವಾಗಿ ಲಭ್ಯಪಡಿಸಬೇಕಾಗಿದೆ.
3. ಪದವೀಧರ ಪ್ರಾಥಮಿಕ ಶಿಕ್ಷಕರು (6 ರಿಂದ 8 ನೇ ತರಗತಿ) ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯು 1 ರಿಂದ 5ನೇ ತರಗತಿ ಶಿಕ್ಷಕರುಗಳಿಗೆ ನಿಗದಿಪಡಿಸಿರುವ ವಿದ್ಯಾರ್ಹತೆಗಿಂತ ಉನ್ನತ ಮಟ್ಟದಾಗಿರುತ್ತದೆ ಎಂಬ ಕಾರಣದಿಂದ 2015 & 2016ನೇ ಸಾಲಿನಲ್ಲಿ ಪದವೀಧರ ಪ್ರಾಥಮಿಕ ಶಿಕ್ಷಕರು, ಸಹ ಶಿಕ್ಷಕರು/ಶಿಕ್ಷಕಿಯರು ಎಂಬುದಾಗಿ ಹೊಸ ವೃಂದವನ್ನು ಸೃಜಿಸಲಾಗಿದೆ.
4. ಸರ್ಕಾರದ ಆದೇಶ ಸಂಖ್ಯೆ: ಇಡಿ 626 ಪಿಬಿಎಸ್ 2014, ದಿನಾಂಕ:19.05.2017ರ ಪ್ರಕಾರ ವೃಂದ ಬಲ ಆದೇಶದಲ್ಲಿ "ಪ್ರಾಥಮಿಕ ಶಾಲಾ ಶಿಕ್ಷಕರು" (1 ರಿಂದ 5ನೇ ತರಗತಿ) ಹಾಗೂ "ಪದವೀಧರ ಪ್ರಾಥಮಿಕ ಶಿಕ್ಷಕರು" (6 ರಿಂದ 8ನೇ ತರಗತಿ) ಎಂಬುದಾಗಿ ವರ್ಗಿಕರಿಸಲಾಗಿದೆ.
5. "ಪ್ರಾಥಮಿಕ ಶಾಲಾ ಪದವೀಧರ ಸಹ ಶಿಕ್ಷಕರು/ಶಿಕ್ಷಕಿಯರು" ವೃಂದವನ್ನು ಹೊಸ " ಪದವೀಧರ ಪ್ರಾಥಮಿಕ ಶಿಕ್ಷಕರು (6 ರಿಂದ 8ನೇ ತರಗತಿಗಳ)" ವೃಂದದಲ್ಲಿ ವಿಲೀನಗೊಳಿಸಲಾಗುವುದು ಎಂಬುದಾಗಿದೆ.
6. ತದನಂತರ Karnataka Education Department Service (Department of Public Instrution) (Recruitment) (Amendment) Rules, 2017'ರನ್ವಯ ಸರ್ಕಾರಿ ಪ್ರಾಥಮಿಕ ಶಾಲೆಗಳ 1 ರಿಂದ 5ನೇ ತರಗತಿ ಹಾಗೂ ಪದವೀಧರ ಪ್ರಾಥಮಿಕ ಶಿಕ್ಷಕರು (6 ರಿಂದ 8 ನೇ ತರಗತಿ) ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 626 ಪಿಬಿಎಸ್ 2014, ದಿನಾಂಕ 17.08.2017 ರಿಂದ ಜಾರಿಗೆ ಬಂದಿದೆ.
7. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 626 ಪಿಬಿಎಸ್ 2014, ದಿನಾಂಕ:17.08.2017 ರನ್ವಯ ಶೇ 75:25 ರಂತೆ ನೇರ ನೇಮಕಾತಿ ಮತ್ತು ಬಡ್ತಿಗೆ ( ಡಿ. ಆರ್. / ಪಿ.ಆರ್ ) ಅವಕಾಶವಿರುತ್ತದೆ.
8. ಈ ಮೇಲಿನ ಸರ್ಕಾರದ ಅಧಿಸೂಚನೆ ಪ್ರಕಾರ ಪ್ರಾಥಮಿಕ ಶಾಲಾ ಶಿಕ್ಷಕರು ( 1 ರಿಂದ 5ನೇ ತರಗತಿ) ವೃಂದದಿಂದ ಪದವೀಧರ ಪ್ರಾಥಮಿಕ ಶಿಕ್ಷಕರು ( 6 ರಿಂದ 8ನೇ ತರಗತಿ) ವೃಂದಕ್ಕೆ ಸೇವಾ ನಿರತ ಕೋಟಾದಡಿ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಬಡ್ತಿ ಹೊಂದಲು ಅವಕಾಶವಿರುತ್ತದೆ.

9. ತದನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 94 ಪಿಬಿಎಸ್ 2018 (ಭಾ-3), ದಿನಾಂಕ:10.12.2021 ರನ್ವಯ ಶೇ 67:33 ರಂತೆ ನೇರ ನೇಮಕಾತಿ ಮತ್ತು ಬಡ್ತಿಗೆ ಅವಕಾಶ ಕಲ್ಪಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಲಾಗಿದೆ.
10. ಆದರೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ಸೇವಾ ನಿರತ (ಪಿ.ಆರ್.) ಕೋಟಾದಡಿ ಪರೀಕ್ಷೆ ಮೂಲಕ ಬಡ್ತಿ ಹೊಂದಬೇಕೆಂಬ ಷರತ್ತನ್ನು ಪರಿಷ್ಕರಿಸಿ ಸೇವಾ ಜೇಷ್ಠತೆ ಮೂಲಕ ಬಡ್ತಿಗೆ ಅವಕಾಶ ಕಲ್ಪಿಸಲು ಕೋರಿಕೆ ಸಲ್ಲಿಸಿ ಸೇವಾ ನಿರತ ಕೋಟಾದಡಿ ಬಡ್ತಿ ಅವಕಾಶವನ್ನು ಬಳಕೆ ಮಾಡಿಕೊಂಡಿರುವುದಿಲ್ಲ.
11. ಪ್ರಸ್ತುತ ಸೇವಾ ನಿರತ ಕೋಟಾದಡಿ ಪರೀಕ್ಷೆ ಮೂಲಕ ಬಡ್ತಿ ಹೊಂದಬೇಕೆಂಬ ಷರತ್ತನ್ನು ಪರಿಷ್ಕರಿಸಿ ಸೇವಾ ಜೇಷ್ಠತೆ ಮೂಲಕ ಬಡ್ತಿಗೆ ಅವಕಾಶ ಕಲ್ಪಿಸಲು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.
12. ಸಾಮಾನ್ಯವಾಗಿ ಒಂದು ಹುದ್ದೆಯಿಂದ ಮತ್ತೊಂದು ಉನ್ನತ ಶ್ರೇಣಿಯ ಹುದ್ದೆಗೆ ಬಡ್ತಿ ನೀಡಲಾದ ಸಂದರ್ಭದಲ್ಲಿ ಬಡ್ತಿ ಹೊಂದಿದ ನೌಕರರಿಗೆ ಬಡ್ತಿ ಪಡೆದ ಹುದ್ದೆಯಲ್ಲಿ ಕರ್ತ್ಯವ್ಯಕ್ಕೆ ಹಾಜರಾದ ದಿನಾಂಕದಿಂದ ಮಾತ್ರ ಕೆ.ಸಿ.ಎಸ್ಆರ್ 42(ಬಿ) ರನ್ವಯ ಆರ್ಥಿಕ ಸೌಲಭ್ಯಗಳನ್ನು ನೀಡಲು ಮತ್ತು ಬಡ್ತಿ ಹೊಂದಿದ ದಿನಾಂಕದಿಂದ ಮಾತ್ರ ಸೇವಾ ಜೇಷ್ಠತೆಯನ್ನು ಪರಿಗಣಿಸಲು ಅವಕಾಶವಿರುತ್ತದೆ.
13. 2017ರ ಪ್ರಾಥಮಿಕ ಶಾಲಾ ಸಹ ಶಿಕ್ಷಕ ವೃಂದದ C & R ನಲ್ಲಿ 2016 ಕ್ಕಿಂತ ಮೊದಲು ನೇಮಕಾತಿಯಾದ 1 ರಿಂದ 7, 1 ರಿಂದ 8ರ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು, 6 ರಿಂದ 8 ಎಂದು ಪದನಾಮೀಕರಿಸಿ ಸೇವಾ ಜೇಷ್ಠತೆಯೊಂದಿಗೆ ವಿಲೀನಗೊಳಿಸಲು ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ ಪ್ರಕಾರ ಮತ್ತು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿರುವುದಿಲ್ಲ.
14. ಹಿಂದಿನ ಸೇವೆಯನ್ನು ಸಂರಕ್ಷಿಸಿ 6 ರಿಂದ 8ಕ್ಕೆ ಜೇಷ್ಠತೆಯೊಂದಿಗೆ ನಿಯುಕ್ತಿಗೊಳಿಸಿ ವಿಶೇಷ ಪ್ರಕರಣವೆಂದು ಪರಿಗಣಿಸಲು ಚಾಲ್ತಿ ಸೇವಾ ನಿಯಮಗಳ ಪ್ರಕಾರ ಅವಕಾಶವಿರುವುದಿಲ್ಲ.
15. 2017 ನಂತರ ಪದವೀಧರ ಪ್ರಾಥಮಿಕ ಶಿಕ್ಷಕರ ನೇರ ನೇಮಕಾತಿ ( ಡಿ. ಆರ್) ವಿವರ ಕೆಳಗಿನಂತಿವೆ:-

| | |
|---|---|
| 2017-2018 | 3389 |
| 2019-2020 | 1994 |
| 2022-23 | 11494 |
| **ಒಟ್ಟು-** | **16877** |

16. ಈ ರೀತಿ ಒಟ್ಟು 16877 ಪದವೀಧರ ಪ್ರಾಥಮಿಕ ಶಿಕ್ಷಕರ ಸೇವಾ ಹಿರಿತನವನ್ನು ಕಡೆಗಣಿಸಿದ್ದಲ್ಲಿ, ಸೇವಾ ಹಿರಿತನವನ್ನು ಪರಿಗಣಿಸುವಂತೆ ನೇರ ನೇಮಕಾತಿ ಹೊಂದಿರುವ ಶಿಕ್ಷಕರು ನ್ಯಾಯಾಲಯದ ಮೊರೆ ಹೋಗಬಹುದಾದ ಸಾಧ್ಯತೆಗಳಿವೆ. ಇದು ಮತ್ತೊಂದು ವೃಂದದ ತೀವ್ರ ಆಕ್ಷೇಪಣೆಗೆ ಒಳಗಾಗಲಿದೆ ಮತ್ತು ಸೇವಾ ನಿಯಮಗಳಿಗೆ ವಿರುದ್ಧವಾಗಿದೆ.
17. ಪ್ರಾಥಮಿಕ ಶಾಲಾ ಶಿಕ್ಷಕರ ಈ ವಿಭಿನ್ನ ಕೋರಿಕೆಯನ್ನು ಪರಿಗಣಿಸಿದ್ದಲ್ಲಿ ಇದು ಪೂರ್ವನಿದರ್ಶನ ಪ್ರಕರಣವಾಗಲಿದ್ದು, ಈ ಮಾದರಿಯನ್ನು ಇತರೆ ಇಲಾಖೆಗಳ ಇತರೆ ವೃಂದಗಳು ಕೋರಿಕೆ ಸಲ್ಲಿಸುವ ಸಾಧ್ಯತೆಗಳಿವೆ.

**ಸಂಖ್ಯೆ: ಇಪಿ 62 ಪಿಎಂಎ 2024**

(ಎಸ್. ಮಧುಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು